

ಹೊಲೆಯನಾಗಿದ್ದರಿಂದ ದಲಿತ ಕಥೆಗಾರ ಎಂದು ಹೆಸರಿಟ್ಟರು. ಆದರೆ ನನ್ನ ಕಥೆಗಳು ಅಸ್ಪೃಶ್ಯ ಅಲ್ಲ. ಜಗತ್ತಿನ ಯಾರು ಬೇಕಾದರೂ ನನ್ನ ಕಥೆಗಳನ್ನು ಓದಿ ಬೆರಗಾಗಬೇಕು ಎಂಬ ಸುಪ್ತ ಆಸೆ ಇತ್ತು. ಎಲ್ಲರೂ ನನ್ನ ಕಥೆಯನ್ನು ಮುಟ್ಟಬೇಕು ಎಂಬ ಕನಸಿತ್ತು.



**◆ ಕ್ರೌರ್ಯ-ಅವಮಾನ-ವಿಷಾದ ಈ ಮೂರು ಬಿಂದುಗಳಿಗೆ ನಿಮ್ಮ ಕಥೆಗಳು ಮತ್ತೆ ಮತ್ತೆ ಮರಳಿವೆ. ಈ ಬಿಂದುಗಳು ಒಂದು ರೀತಿಯಲ್ಲಿ ಸ್ಥಾಯಿ ಲೋಕಗಳಂತೆ ಕಥೆಗಳಲ್ಲಿ ಹರಡಿಕೊಂಡಿವೆ. ಇಂಥ ಬಿಂದುಗಳನ್ನು ಆಹ್ವಾನಿಸಿಕೊಳ್ಳುವ ಮೂಲಕ ಏನನ್ನು ಹುಡುಕಲು ಯತ್ನಿಸಿದಿರಿ?**

ಸಿಗದೇ ಇರುವುದನ್ನು ಹುಡುಕುತ್ತಿರುವೆ. ಒಮ್ಮೊಮ್ಮೆ ಮಳೆ ಜಿಡಿ ಹಿಡಿದು ಸುರಿಯುತ್ತಿರುವಾಗ ಆಕಾಶ ದುಃಖಿಸುತ್ತಿದೆ ಎನಿಸುತ್ತದೆ. ಯಾರೋ ಅನಂತವಾಗಿ ದುಃಖಿಸುತ್ತಿದ್ದಾರೆ ಎನಿಸುತ್ತದೆ. ಈ ಕಂಬನಿಯ ಮಳೆಯಲ್ಲಿ ಮಿಂದು ಅದನ್ನು ಹಿಡಿಯಬೇಕೆನಿಸುತ್ತದೆ. ಮಿಂಚಿನಂತೆ ಚಿಮ್ಮುವ ಭಾಷೆಯ ಜೊತೆ ಸಂಬಂಧ ಮಾಡಬೇಕೆನಿಸುವುದು. ಗುಡುಗಿನಂತೆ ಬಿದ್ದವರು ಎದ್ದು ಅಬ್ಬರಿಸಬೇಕು ಎಂದು ಹುಡುಕುತ್ತೇನೆ. ಅಲ್ಲದೆ ಒಂದು ಕ್ಷಣ ಮಾತ್ರ ಕೈಬೆರಳುಗಳ ಹಿಡಿದು ಜಗ್ಗಿ ಮಾಯವಾದ ಸುಂದರಿಯನ್ನು ತಡಕಾಡುವೆ. ಹಿಂಸೆ, ಅಪಮಾನ ಯಾವತ್ತೂ ಇದ್ದದ್ದೇ. ಜಾತಿ ವ್ಯವಸ್ಥೆಯ ಶಾಪದಿಂದ ಎಲ್ಲಾ ಜಾತಿಗಳು ಆಕ್ರಮಣಕಾರಿಯಾಗಿವೆ. ಭಾರತೀಯ ಸಮಾಜದಲ್ಲಿ ಇಷ್ಟು ಹಿಂಸೆ ತುಂಬಿರುವುದು ಜಾತಿಗಳ ಶ್ರೇಣಿಗಳಿಂದಲೇ. ಜಾತಿಯ ಅಫೀಮಿನ ನಶೆ ಸದಾ ಜಾತಿಗಳ